**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ.2245/2025**

**ಪಿರ್ಯಾದುದಾರರುಃ** ಅಕ್ಷಯ ಮಹಾದೇವ ತಳಿಪೇಠ,
ವಯಾಃ 26 ವರ್ಷ, ಉದ್ಯೋಗಃ ವ್ಯಾಪಾರ,
ಸಾಃ ಆಶ್ರಯ ಬಡಾವಣೆ, ಗೋಕಾಕ,
ತಾಃ ಗೋಕಾಕ.

**- ವಿರುದ್ಧ -**

**ಆರೋಪಿಃ** ರಾಮಲಿಂಗ ಭೀಮಪ್ಪ ಪಾಟೀಲ,
ವಯಾಃ 55 ವರ್ಷ, ಸಾಃ ಮೆಳವಂಕಿ,
ತಾಃ ಗೋಕಾಕ.

**ಆಪಾದನೆ**

**ಶ್ರೀಮತಿ. ಚೈತ್ರಾ ಕುಲಕರ್ಣಿ, ಬಿ.ಎ., ಎಲ್‌ಎಲ್.ಬಿ., ಎಲ್‌ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಒಳ್ಳೆಯ ಸ್ನೇಹಿತರು ಮತ್ತು ವ್ಯಾಪಾರಸ್ಥರಿದ್ದು. ಹೀಗಿರುವಾಗ ಆರೋಪಿಯಾದ ನೀವು ಡಾಃ ಸುನಧೋಳಿಮಠ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಾಗ ಪಿರ್ಯಾದುದಾರರ ಕಡೆಯಿಂದ ರೂ.3,13,000/- ಗಳ ಆಸ್ಪತ್ರೆ ಬಿಲ್ಲ ಪಾವತಿ ಮಾಡಿಸಿಕೊಂಡು, ನಂತರ ನೀವು ಸದರಿ ಪಾವತಿಸಿದ ಹಣಕ್ಕೆ ಪಿರ್ಯಾದಿದಾರರಿಗೆ ನೀವು ದಿಃ 16.09.2024 ಮತ್ತು 26.09.2024 ರಂದು ನಿಮ್ಮ ಖಾತೆಯಿರುವ ಆರ್ ಬಿ ಎಲ್ ಬ್ಯಾಂಕ, ಶಾಖೆಃ ಗೋಕಾಕ ಇಲ್ಲಿಗೆ ಸೇರಿದ ಎರಡು ಚೆಕ್ ನಂ.000001 ಮತ್ತು ನಂ.000002 ಗಳನ್ನು ರೂ.1,56,000/- ಮತ್ತು ರೂ.1,57,000/- ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತಿರಿ.

ಆರೋಪಿಯಾದ ನೀವು ನೀಡಿದ ಚೆಕ್ಕಗಳನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಬ್ಯಾಂಕ್ ಆಫ್ ಬರೋಡಾ., ಗೋಕಾಕ ಶಾಖೆ ಇಲ್ಲಿಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆ ನಿಷ್ಕ್ರಿಯವಾಗಿದೆ "Account Dormant" ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 16.10.2024 ರಂದು ಸದರಿ ಚೆಕ್‌ಗಳು ಅಮಾನ್ಯಗೊಂಡಿರುತ್ತವೆ.

ನಂತರ ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 19.11.2024 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ, ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಗಳ ಹಣವನ್ನು ಮರುಸಂದಾಯ ಮಾಡದ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

<u>**ಆರೋಪಿಯ ಹೇಳಿಕೆ**</u>

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ? ತಿಳಿಯಿತೇ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ **04.11.2025** ರಂದು ತೆರೆದ ನ್ಯಾಯಾಲಯದಲ್ಲಿ ದೃಡೀಕರಿಸುತ್ತೇನೆ.

**(ಚೈತ್ರಾ ಕುಲಕರ್ಣಿ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**